**ಸಿ ಸಿ ನಂ. 96/2019**

**ಪಿಡಬ್ಲ್ಯೂ - 1 ಅಬ್ರಹಂ ಮಣಿ**

**ದಿನಾಂಕ 03-06-2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು : ಶ್ರೀ. ಎಸ್ ಬಿ ಎಂ ಆರೋಪಿ ಪರ ವಕೀಲರಿಂದಃ**

ನಾನು ಕೃಷಿಕ. ನನಗೆ ಕಾಫೀ ಹಾಗೂ ಕಾಳು ಮೆಣಸು 3 ಎಕರೆ ತೋಟವಿರುತ್ತದೆ. ಆ ರೀತಿ ನನ್ನ ಆಸ್ತಿ ಹೆಗ್ಗಳ ಗ್ರಾಮದಲ್ಲಿರುತ್ತದೆ. ನನ್ನ ಹೆಂಡತಿ ಅನುದಾನಿತ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಾರೆ. ನನಗೆ ವರ್ಷಕ್ಕೆ ಸುಮಾರು 60 ಚೀಲ ಕಾಫೀ, 100 ಕೆಜಿ ಮೆಣಸಿನ ಕಾಳಿನ ಫಸಲು ಬರುತ್ತದೆ.

ನನಗೆ ಇಬ್ಬರು ಮಕ್ಕಳಿದ್ದು, ಹಿರಿಯ ಮಗ ಪದವಿ ಮುಗಿಸಿರುತ್ತಾರೆ ಹಾಗೂ ಮಗಳು ಬಿಡಿಎಸ್ 2 ನೇ ವರ್ಷದ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನನ್ನ ಮಗ ವಿದ್ಯಾಭ್ಯಾಸ ಮುಗಿಸಿ ಮನೆಯಲ್ಲೆ ಇರುತ್ತಾನೆ. ನನಗೆ ಆರೋಪಿ ಸುಮಾರು 2016 ನೇ ಇಸವಿಯಿಂದ ಪರಿಚಿತರು. ಆರೋಪಿ ನನಗೆ ನನ್ನ ಸ್ನೇಹಿತನಾದ ಉತ್ತಮ್ ರವರಿಂದ ಪರಿಚಿತರಾಗಿರುತ್ತಾರೆ. ಸದರಿ ಉತ್ತಮ್ ರವರು ಆಯುರ್ವೇದಿಕ್ ಅಂಗಡಿಯನ್ನು ಇಟ್ಟುಕೊಂಡು ವಿರಾಜಪೇಟೆಯಲ್ಲಿರುತ್ತಾರೆ ಎಂದರೆ ಸರಿ. ಉತ್ತಮ್ ಆಯುರ್ವೇದಿಕ್ ಅಂಗಡಿಯಲ್ಲಿದ್ದಾಗ ಅವರ ಮೂಲಕ ಆರೋಪಿ ಪರಿಚಯವಾಗಿರುತ್ತದೆ. ಆರೋಪಿಯ ತಂದೆಯ ಹೆಸರು ನನಗೆ ಸರಿಯಾಗಿ ಗೊತ್ತಿರುವುದಿಲ್ಲ. ಆರೋಪಿ ನೆಲ್ಲಿಹುದಿಕೇರಿಯಲ್ಲಿ ವಾಸವಿರುತ್ತಾರೆ. ನೆಲ್ಲಿಹುದಿಕೇರಿಯ ಪಟ್ಟಣದ ಪಕ್ಕದಲ್ಲಿ ಆರೋಪಿಯ ಮನೆ ಇರುತ್ತದೆ.

ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ವ್ಯವಹಾರ ಇರುವುದಿಲ್ಲ. ಆರೋಪಿಯನ್ನು ಸುಮಾರು ಬಾರಿ ನೋಡಿ ಪರಿಚಯ ಅಷ್ಟೆ. ಆರೋಪಿ ಮರದ ವ್ಯಾಪಾರ ಹಾಗೂ ಕಾಫೀ ವ್ಯಾಪಾರ ಮಾಡುತ್ತಾರೆ. ಆ ರೀತಿ ಆರೋಪಿಯೇ ತಿಳಿಸಿರುತ್ತಾರೆ. ಅವರ ಅಂಗಡಿಯ ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು 2018 ನೇ ಇಸವಿಯಲ್ಲಿ ಒಮ್ಮೆ ಆರೋಪಿಯ ಮನೆಗೆ ಹೋಗಿರುತ್ತೇನೆ. ಆ ರೀತಿ ಸ್ನೇಹದ ಆಧಾರದ ಮೇಲೆ ಅವರ ಮನೆಗೆ ಹೋಗಿರುತ್ತೇನೆ. ನಾನು ಅವರ ಮನೆಗೆ ಹೋದಾಗ ಅವರ ಹೆಂಡತಿ ಹಾಗೂ ಮಕ್ಕಳು

ಇದ್ದಿರುತ್ತಾರೆ. ಆರೋಪಿಗೆ ಎಷ್ಟು ಮಕ್ಕಳು ಎಂದು ನನಗೆ ಸರಿಯಾಗಿ ಗೊತ್ತಿರುವುದಿಲ್ಲ. ನಾನು ಆರೋಪಿಯ ಮನೆಗೆ ಯಾವತ್ತೂ ಹೋಗಿರುವುದಿಲ್ಲ ಹಾಗೂ ನನಗೂ ಹಾಗೂ ಆರೋಪಿಗೂ ಯಾವುದೇ ಪರಿಚಯವಿರುವುದಿಲ್ಲ ಎಂದರೆ ಸರಿಯಲ್ಲ.

ನನಗೆ ರಾಜೇಶ್ ಎಂಬುವರ ಪರಿಚಯವಿರುತ್ತದೆ. ಸದರಿ ರಾಜೇಶ್ ಉತ್ತಮ್ ರವರ ಮೂಲಕ ಪರಿಚಿತರಾಗಿರುತ್ತಾರೆ. ಸದರಿ ರಾಜೇಶ್ ನನಗೆ 2016ನೇ ಇಸವಿಯಿಂದ ಪರಿಚಿತರು. ನನಗೂ ಹಾಗೂ ಸದರಿ ರಾಜೇಶ್ ನಡುವೆ ಯಾವುದೇ ವ್ಯವಹಾರ ಇರುವುದಿಲ್ಲ. ನಾನು ಯಾವುದೇ ಆದಾಯ ತೆರಿಗೆ ಪಾವತಿದಾರನಲ್ಲ. ಮನೆ ಖರ್ಚು ತಿಂಗಳಿಗೆ ಸುಮಾರು ಹದಿನೈದು ಸಾವಿರ ಬರುತ್ತದೆ. ಮಕ್ಕಳ ವಿದ್ಯಾಭ್ಯಾಸದ ಖರ್ಚು ಸಹ ಬರುತ್ತದೆ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಾಯವಕಾಶ ನೀಡಿ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ.

ಸಹಿ/-

(ಸಂತೋಷ ಕೊಠಾರಿ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ